**OS. No. 21/2023** **DW – 2**

ಪ್ರಮಾಣೀಕರಿಸಲಾದ ದಿನಾಂಕಃ **05.06.2026.**

<u>ಪಾಟೀ ಸವಾಲು ವಾದಿ ಪರ ಶ್ರೀ **NS** ವಕೀಲರಿಂದಃ</u>

ನನ್ನ ತಾತ ಗುರುಸಿದ್ದಯ್ಯ ಮತ್ತು ತಂದೆ ಸಿದ್ದಯ್ಯರವರ ಮರಣಾ ನಂತರ ನನ್ನ ತಾಯಿ ದೇವೀರಮ್ಮ ಮತ್ತು ದೊಡ್ಡಪ್ಪ ಶಿವಯ್ಯ ಹಾಗೂ ಚಿಕ್ಕಪ್ಪ ಚೆನ್ನಬಸವಯ್ಯರವರು ದಿಃ 05.01.1971 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಕಸಬಾ ಹೋ. ಪುರ ಗ್ರಾಮದ ಸ.ನಂ. 8 ರಲ್ಲಿ ಒಟ್ಟು ವಿಸ್ತೀರ್ಣ 5 ಎಕರೆ 16 ಗುಂಟೆ, 1 ಗುಂಟೆ ಖರಾಬು ಜಾತ, 5 ಎಕರೆ 15 ಗುಂಟೆಯನ್ನು ವಿಭಾಗ ಮಾಡಿಕೊಂಡಿದ್ದು ಸದರಿ ವಿಭಾಗದಲ್ಲಿ ಶಿವಯ್ಯರವರಿಗೆ 1 ಎಕರೆ 32 ಗುಂಟೆ , ನನ್ನ ತಾಯಿ ದೇವೀರಮ್ಮ ರವರಿಗೆ 1 ಎಕರೆ 32 ಗುಂಟೆ , ವಾದಿ ತಂದೆ ಚೆನ್ನಬಸವಯ್ಯರವರಿಗೆ 1 ಎಕರೆ 31 ಗುಂಟೆ ಹಿಸ್ಸೆ ಬಂದಿರುತ್ತದೆ ಎಂದರೆ ಸರಿ. ಸದರಿ ವಿಭಾಗ ಪತ್ರದ ನಂತರ ಎಮ್.ಆರ್. ನಂ. 9/1989-90 ಖಾತೆ

ಪಹಣಿ ದಾಖಲೆ ಆಗಿ ಅವರವರ ಹಿಸ್ಸೆಯನ್ನು ದಾಖಲೆ ಮಾಡಿ ಸ್ವಾಧೀನಾನುಭವದಲ್ಲಿ ಇದ್ದು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

2017 ನೇ ಸಾಲಿನಲ್ಲಿ ಸ.ನಂ. 8 ನ್ನು ಹದ್ದುಬಸ್ತು ದುರಸ್ಥು ಮಾಡಲು ನಾನು ಅರ್ಜಿ ನೀಡಿದ್ದೆ ಎಂದರೆ ಸರಿ. ಸದರಿ ಅರ್ಜಿ ಆಧಾರದ ಮೇಲೆ ಸರ್ವೇಯರು ಸ್ಥಳಕ್ಕೆ ಭೇಟಿ ನೀಡಿ ಹದ್ದು ಬಸ್ತು ಮಾಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾವೆಲ್ಲರೂ ಸ್ಥಳದಲ್ಲಿ ಹಾಜರಿದ್ದು ಸದರಿ ಹದ್ದು ಬಸ್ತು ದಾಖಲೆಗೆ ಸಹಿ ಮಾಡಿರುತ್ತೇವೆ ಎಂದರೆ ಸರಿ. ನನ್ನ ಚಿಕ್ಕಪ್ಪ ಚೆನ್ನಬಸವಯ್ಯರವರಿಗೆ ವಾದಿ ಒಬ್ಬನೇ ಮಗ ಎಂದರೆ ಸರಿ. ಚೆನ್ನಬಸವಯ್ಯರವರ ಮರಣಾ ನಂತರ ಅವರ ಹಿಸ್ಸೆಯ ಜಮೀನು ವಾದಿಯ ಹೆಸರಿಗೆ ಪವತಿವಾರಸು ಖಾತೆಯಾಗಿರುತ್ತದೆ ಎಂದರೆ ಸರಿ. 2017 ರ ಹದ್ದು ಬಸ್ತು ಸಮಯಕ್ಕೆ ಚೆನ್ನಬಸವಯ್ಯರವರು ಮರಣಹೊಂದಿದ್ದು ವಾದಿಯ ಹೆಸರಿಗೆ ಹದ್ದು ಬಸ್ತು ದಾಖಲೆಯಾಗಿರುತ್ತದೆ ಎಂದರೆ ಸರಿ.

ಅದೇ ಸಮಯದಲ್ಲಿ ನಿಪಿ.8 ರಂತೆ ಅಳತೆ ಮಾಡಿ ನಕ್ಷೆಯನ್ನು ತಯಾರು ಮಾಡಿರುತ್ತಾರೆ ಎಂದರೆ ಸರಿ. ವಾದಿಗೆ ಬಂದ ಹದ್ದುಬಸ್ತಿನ ಹಿಸ್ಸೆಯ ಜಮೀನು ಸ.ನಂ. 8/1 ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಮ್ಮ ತಾಯಿ ದೇವೀರಮ್ಮನ ಹಿಸ್ಸೆಗೆ ಬಂದ ಜಮೀನು ಸ.ನಂ. 8/2 ಮತ್ತು 8/3 ಆಗಿರುತ್ತದೆ ಎಂದರೆ ಸರಿ. ನಮ್ಮ ದೊಡ್ಡಪ್ಪ ಶಿವಯ್ಯನರವರ ಹಿಸ್ಸೆಯ ಜಮೀನಿಗೆ ಸ.ನಂ. 8/4 ನೀಡಲಾಗಿರುತ್ತದೆ ಎಂದರೆ ಸರಿ.

ವಾದಿಯ ಜಮೀನಿನ ಉತ್ತರಕ್ಕೆ ನನ್ನ ಜಮೀನು ಬರುತ್ತದೆ ಎಂದರೆ ಸರಿ. ವಾದಿಯ ಸ.ನಂ. 8/1 ರಲ್ಲಿನ 1 ಎಕರೆ 31 ಗುಂಟೆಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಸದರಿ ಜಮೀನನ್ನು ವಾದಿಯವರು ಅವರ ಸ್ವಂತ ಹಕ್ಕಿನ ಮೇಲೆ ಅನುಭವಿಸುತ್ತಿದ್ದಾರೆ ಎಂದರೆ ಸರಿ.

ಸ.ನಂ. 8 ಒಟ್ಟು ಜಮೀನು ಉತ್ತರಾಭಿಮುಖವಾಗಿ ಇಳಿಜಾರು ಇದೆ ಎಂದರೆ ಸರಿಯಲ್ಲ, ಪಶ್ಚಿಮಕ್ಕೆ ಇಳಿಜಾರು ಇರುತ್ತದೆ. ವಾದಿಯ ಜಮೀನು ನಮ್ಮ ಜಮೀನಿಗಿಂತ

ಎತ್ತರದಲ್ಲಿ ಇದೆ ಎಂದರೆ ಸರಿಯಲ್ಲ ಎರಡೂ ಜಮೀನು ಸಮನಾಗಿರುತ್ತದೆ. ವಾದಿಯು ತಮ್ಮ ಭಾಗದ ಜಮೀನಿಗೆ ಬದುವನ್ನು ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ದಕ್ಷಿಣಕ್ಕೆ ಹಾಕಿಕೊಂಡಿರುತ್ತಾರೆ ಉತ್ತರಕ್ಕೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಅವರ ಜಮೀನಿಗೆ ಸರ್ವೇ ಹದ್ದುಬಸ್ತಿನಂತೆ ತಂತಿ ಬೇಲಿ ನಿರ್ಮಾಣ ಮಾಡಲು ಕಲ್ಲು ಕಂಬ ಇಟ್ಟಿರುತ್ತಾರೆ ಎಂದರೆ ಅವರ ಜಮೀನಿನಲ್ಲಿ ಇಟ್ಟಿರುತ್ತಾರೆ. ಅವರು ತಂತಿ ಬೇಲಿ ನಿರ್ಮಾಣ ಮಾಡಲು ನಾವು ತೊಂದರೆ ನೀಡಿರುತ್ತೇವೆ ಹಾಗೂ ಅವರ ಉತ್ತರ ಭಾಗದ ಬದುವನ್ನು ಉಳುಮೆ ಮಾಡಿ ಹಾಳು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ವಾದಿಯವರು ಅನಾರೋಗ್ಯವಂತರು ಎಂದರೆ ಸರಿಯಲ್ಲ. ವಾದಿಯು ಅನಾರೋಗ್ಯರಾಗಿದ್ದು ಆರ್ಥಿಕವಾಗಿ ದುರ್ಬಲರಾಗಿದ್ದು ನಾವು ಅವರ ಮೇಲೆ ದೌರ್ಜನ್ಯ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ